# 9

# ಕ್ಷಮಿಸಲಾರದ ಕ್ಷಮಿಸಲ್ಪಟ್ಟ ಸೇವಕ

## (ಮತ್ತಾಯ 18:21-35)

*ಪರಿವರ್ತಿತ ಜೀವಿತವು ಕ್ಷಮಾಪಣೆಯ ಜೀವಿತವಾಗಿದ್ದು ಯೇಸು ಕಲಿಸಿದ ಕಥೆಯಾದಂಥ ...*

ಮತ್ತಾಯ 18 ಕ್ಷಮಾಪಣೆಯ ವಿಷಯದ ಬಗೆಗೆ ಇರುವುದಾಗಿದೆ. ಕುರುಬನು ಕುರಿಯನ್ನು ಕಳೆದುಕೊಂಡನು ಮತ್ತು ಅದನ್ನು ಹುಡುಕಲು ಹೊರಟ ಕಥೆಯನ್ನು ಯೇಸು ಹೇಳಿದನು. ಹುಡುಕಿದನು, "ಅದು ತಪ್ಪಿಸಿಕೊಳ್ಳದೆ ಇರುವ ತೊಂಬತ್ತೊಂಬತ್ತು ಕುರಿಗಳಿಗಿಂತ ಹೆಚ್ಚಾಗಿ ಇದ್ದು ಆ ಒಂದಕ್ಕೋಸ್ಕರ ಆತನು ಹೆಚ್ಚಾಗಿ" ಸಂತೋಷಪಟ್ಟನು. ಇದು ದೇವರು ಪಾಪಿಗಳನ್ನು ಎಷ್ಟು ಪ್ರೀತಿಸುತ್ತಾನೆ ಹಾಗೂ ಕ್ಷಮಿಸಲೂ ಬಯಸುವವನಾಗಿರುತ್ತಾನೆ ಎಂಬುದನ್ನು ತೋರಿಸುವುದಾಗಿದೆ.

ನಿನಗೆ ವಿರುದ್ಧವಾಗಿ ಪಾಪಮಾಡಿದ ನಿನ್ನ ಸಹೋದರರನೊಡನೆ ಏನು ಮಾಡಬೇಕೆಂದು ಯೇಸು ಹೇಳಿದನು. ಅವನೆಡೆಗೆ ಹೋಗು, "ಅವನು ನಿನ್ನ ಮಾತನ್ನು ಕೇಳಿದರೆ ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವಿ" ಅವನು ಕೇಳದೆ ಹೋದರೆ ಎರಡು ಮೂರು ಸಾಕ್ಷಿಗಳನ್ನು ಕರೆದುಕೊಂಡು ಹೋಗು. ಅವನು ಅವರ ಮಾತನ್ನು ಕೇಳದೇ ಹೋದರೆ ಸಭೆಗೆ ಹೇಳು. ಇದು ಪಶ್ಚಾತ್ತಾಪ ಮತ್ತು ಕ್ಷಮಾಪಣೆಯನ್ನು ತರುವದರ ಬಗೆಯನ್ನು ಸೂಚಿಸುವ ಪ್ರಕ್ರಿಯೆಯನ್ನು ಸೂಚಿಸುವುದಾಗಿದೆ. ಸೂಚ್ಯವಾದ ವಿಚಾರವೆಂದರೆ, ಪಾಪಿಯು ಪಶ್ಚಾತ್ತಾಪಪಡುವುದಕ್ಕೆ ಎಲ್ಲವನ್ನೂ ಮಾಡು ಮತ್ತು ಅವನು ಹಾಗೆ ಮಾಡಿದ್ದಾದರೆ ಆತನನ್ನು ಕ್ಷಮಿಸು! (ಮತ್ತಾಯ 18:15-20).

ನಾವು ಇದನ್ನು ಓದಿದಾಗ, ಅದರ ಗಂಭೀರತೆಗೆ ಪ್ರಭಾವಿತರಾಗುವತ್ತ ನಮ್ಮನ್ನು ನಡೆಸುವದಾಗಿದೆ. ಆದರೆ ಪೇತ್ರನು ಹಾಗಲ್ಲ. ಆತನು ಕ್ಷಮಿಸಬೇಕಾದ ಪಶ್ಚಾತ್ತಾಪಪಟ್ಟು ಪಾಪಿಯ ಸತ್ಯಾಂಶದ ಜೊತೆಗೆ ಪ್ರಭಾವಿತನಾಗಿದ್ದನು. ಆದರೆ ಹಲವು ಬಾರಿ ಆ ಕ್ಷಮಾಪಣೆಯು ಹೇಗೆ ವಿಸ್ತರಿಸಲ್ಪಡುತ್ತದೆಂದು ಆತನು ಆಶ್ಚರ್ಯಪಡುತ್ತಾನೆ.

> ಆಗ ಪೇತ್ರನು ಆತನ ಬಳಿಗೆ ಬಂದು, "ಸ್ವಾಮಿ ನನ್ನ ಸಹೋದರನು ನನಗೆ ತಪ್ಪು ಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೋ ಎಂದು ಕೇಳಲು ಯೇಸು ಅವನಿಗೆ ಏಳುಸಾರಿ ಎಂದಲ್ಲ, ಎಪ್ಪತ್ತು ಸಾರಿ ಎಂದು ನಿನಗೆ ಹೇಳುತ್ತೇನೆ" (ಮತ್ತಾಯ 18:21, 22).

ಈ ಸೂಚನೆಯ ಪ್ರಕಾರ ತನಗೆ ತಪ್ಪು ಮಾಡಿದವನನ್ನು ಆತನು ಏಳುಸಾರಿ ಕ್ಷಮಿಸಬೇಕು ಎಂದು, ಪೇತ್ರನು ಯೆಹೂದಿ ಧರ್ಮದ ರಬ್ಬಿಗಳನ್ನೂ ಮೀರಿದ ಸಲಹೆಡೆಗೆ ಹೋಗುತ್ತಾನೆ. ಒಬ್ಬನು ಮೂರು ಸಾರಿ ಕ್ಷಮಿಸಬೇಕು, ಆದರೆ ನಾಲ್ಕು ಸಾರಿ ಕ್ಷಮಿಸಬಾರದು.[1] ಆದರೆ ಯೇಸು - "ಕೇವಲ ಏಳು ಸಾರಿಯಲ್ಲ ಆದರೆ ಎಪ್ಪತ್ತು ಸಾರಿ" ಎಂದು ಹೇಳಿದ್ದಾನೆ.

ನಾವೊಂದು ನೋಟು ಪುಸ್ತಕ ಹಿಡಿದು, ನಮ್ಮ ವಿರುದ್ಧದ ತಪ್ಪುಗಳನ್ನು ಎಣಿಸ ಬೇಕು ನಾವು ಸರಿಯಾಗಿ 490 ಸಾರಿ ಕ್ಷಮಿಸಬೇಕು ಅದಕ್ಕಿಂತ ಹೆಚ್ಚಲ್ಲ ಎಂದು ಯೇಸುವಿನ

ಮಾತಿನ ಅರ್ಥವಲ್ಲ. "ನೀನು 490 ಬಾರಿ ನನ್ನ ವಿರುದ್ಧ ತಪ್ಪು ಮಾಡ ಬೇಕು, ನಾನು ನಿನ್ನನ್ನು ಕ್ಷಮಿಸಲೇಬೇಕು, ಆದರೆ 491ನೇ ಬಾರಿ "ಆಹ್! ಇದು ಬಹಳಾಯಿತು! ಆ ಒಂದನ್ನು ನಾನು ಕ್ಷಮಿಸಲಾರೆನು" ಎಂದು ನಾನು ಹೇಳಬಹುದು ಎಂದು ಆತನ ಮಾತಿನ ಅರ್ಥವಲ್ಲ. ಮಾಡುವ ತಪ್ಪಿನಂತೆಯೇ ಕ್ಷಮಾಪಣೆಯ ನಿರಂತರವಾದದ್ದು ಆಗಿರಬೇಕು, ಅದು ಎಷ್ಟೇ ಸಾರಿ ಆಗಿರಲಿ ಸಮಸ್ಯೆಯಿಲ್ಲ ನಾವು ಕ್ಷಮಿಸುತ್ತಲೇ ಇರಬೇಕು.

ಕ್ಷಮಾಪಣೆಯ ಮೇಲಿನ ಈ ಪಾಠವನ್ನು ಬಲಪಡಿಸಲು ಯೇಸು ದೊಡ್ಡ ಸಾಲದ ಮನ್ನಾ ಮಾಡಿಸಿಕೊಂಡಾರೋ ಚಿಕ್ಕ ಸಾಲವನ್ನು ಕ್ಷಮಿಸದಂತಹ ಒಬ್ಬನ ಕಥೆಯನ್ನು ಹೇಳಿದನು. ಆತನು *ಕ್ಷಮೆನೀಡದ ಕ್ಷಮಿಸಲ್ಪಟ್ಟ ಸೇವಕನು ಆಗಿದ್ದಾನೆ*! ಈ ಕಥೆಯಲ್ಲಿ ನಾವು ಕ್ಷಮಾಪಣೆಗೆ ಸಂಬಂಧಿಸಿದಂತಹ ನಾಲ್ಕು ವಿಭಿನ್ನ ರೀತಿಯ ಹಂತಗಳಲ್ಲಿ ನಾವು ನೋಡಲಿದ್ದೇವೆ.

## ಆತನು ಕ್ಷಮಿಸಲ್ಪಡದ ಸೇವಕ

ವಚನ 23ರಲ್ಲಿ ನಾವು ಓದುವಂತೆ, "ಆದುದರಿಂದ ಪರಲೋಕ ರಾಜ್ಯವು ತನ್ನ ಸೇವಕರಿಂದ ಲೆಕ್ಕಾ ತೆಗೆದುಕೊಳ್ಳಬೇಕೆಂದಿದ್ದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ." ಈ ಸಾಮ್ಯದಲ್ಲಿನ ಅರಸನು ದೇವರನ್ನು ಪ್ರತಿನಿಧಿಸುವವನಾಗಿದ್ದಾನೆ. ಹೀಗೆ, *ದೇವರು ನಮ್ಮನ್ನು ಲೆಕ್ಕಕೊಡುವುದಕ್ಕೆ ಇರಿಸಿದ್ದಾನೆ* ಎಂಬುದನ್ನು ನೆನಪಿಸುವುದಾಗಿದೆ. ಆತನು ನಮ್ಮನ್ನು ಬಲ್ಲವನಾಗಿದ್ದಾನೆ; ನಮ್ಮ ಪಾಪಗಳನ್ನು ನಮ್ಮ ಲೆಕ್ಕಕ್ಕೆ ಇರಿಸುವವನಾಗಿದ್ದಾನೆ ಮತ್ತು ಮುಂದೊಂದು ದಿನ ನ್ಯಾಯತೀರ್ಪಿನ ದಿನವು ಬಂದಾಗ ನಾವು ಮಾಡಿದ ಎಲ್ಲಾ ಕಾರ್ಯಗಳಿಗೆ ಅಂದರೆ ಒಳ್ಳೆಯ ಅಥವಾ ದುಷ್ಟ ಕಾರ್ಯಗಳಿಗೆ ಆತು ನಮ್ಮನ್ನು ಲೆಕ್ಕ ಒಪ್ಪಿಸುವುದಕ್ಕಾಗಿ ಕರೆದು, "ಲೆಕ್ಕವನ್ನು ತೆಗೆದುಕೊಳ್ಳುವವನಾಗಿದ್ದಾನೆ" (ರೋಮಾಪುರ 2:6; ಪ್ರಕಟಣೆ 20:12; ಪ್ರಸಂಗಿ 12:13).

ವಚನ 24ರಲ್ಲಿ, "ಅವನು ಲೆಕ್ಕಾ ತೆಗೆದುಕೊಳ್ಳುವುದಕ್ಕೆ ಪ್ರಾರಂಭಮಾಡಿದಾಗ ಕೋಟ್ಯಾಂತರ ಸಾಲಾ ಮಾಡಿದವನೊಬ್ಬನನ್ನು ಅವನ ಬಳಿಗೆ ಹಿಡಿತಂದರು" ಎಂದು ನೋಡುತ್ತೇವೆ. ತಕ್ಷಣವೇ ನಮ್ಮನ್ನು ಸೆಳೆಯುವ ಒಂದು ಸಂಗತಿ ಎಂದರೆ ಆ ಮನುಷ್ಯನು ತೆಗೆದುಕೊಂಡ ಹಣ: ಹತ್ತು ಸಾವಿರ ತಲಾಂತು!

ಬಹುಶಃ ಒಂದು ತಲಾಂತು ಇದರ ಮೌಲ್ಯವು 1,000 ಆಗಿದೆ ಎಂದು ನನ್ನ ಬೈಬಲ್‌ದ ಅಡಿನುಡಿಯು ಹೇಳುವುದಾಗಿದೆ. ಇದೊಂದು ಸಂಪ್ರದಾಯಬದ್ಧವಾದ ಅಂದಾಜು ಆಗಿದೆ. ಅನೇಕ ವಿಮರ್ಶಕರು ಹೇಳುವಂತೆ ಆ ತಲಾಂತು ಬೆಳ್ಳಿ ತಲಾಂತು ಆಗಿದ್ದು ಇದು ನಮ್ಮ ಎಣಿಕೆಗಿಂತ 1,600 ಅಥವಾ 1,700 - ಶೇಕಡ 60 ಅಥವಾ 70ಕ್ಕಿಂತ ಹೆಚ್ಚಾಗಿರಬಹುದು. ಒಂದು ವೇಳೆ ಅದು ಬಂಗಾರದ ತಲಾಂತು ಆಗಿದ್ದರೆ, ಈಗಿರುವುದಕ್ಕಿಂತ ಇಪ್ಪತ್ತು ಪಟ್ಟು ಹೆಚ್ಚಿನದಾಗಿದೆ! ಪ್ರತಿಯೊಂದು ತಾಲಾಂತಿನ ಮೌಲ್ಯವು 34,000 - ಮುವತ್ನಾಲ್ಕು ಪಟ್ಟು ಎಂದು ನಾವು ಎಣಿಸಿಕೊಳ್ಳಬಹುದಾಗಿದೆ. ಆದರೆ ನಾವು ತಲಾಂತಿನ ಮೌಲ್ಯವನ್ನು 1,000 ಎಂಬಂತೆ ಅದರ ಸಂಪ್ರಾದಾಯತವಾದ ಅಂಕಿಯಾಗಿ ಬಳಸಿಕೊಳ್ಳುತ್ತೇವೆ. ಆ ಬೆಲೆಗನುಗುಣವಾಗಿ, ಆತನು 10,000,000 ಸಾಲವಾಗಿ ಪಡೆದಿದ್ದನು. ಈ ಸಂಖ್ಯೆಯು ನಮ್ಮ ಕಲ್ಪನೆಯನ್ನು ತತ್ತರಿಸುವಂತೆ ಮಾಡುವುದಾಗಿದೆ. ಒಬ್ಬ ಶ್ರೀಮಂತ ಮನುಷ್ಯನೂ ಕೂಡಾ 10,000,000ನ್ನು ಸಾಲವನ್ನು ತೆಗೆದುಕೊಳ್ಳದ ಬಂಗಾರದ ಅಳತೆಯ ಸಾಲವನ್ನಾಗಿ ಇದನ್ನು ಯೋಚಿಸಬಹುದಾಗಿದೆ.

ಆದರೆ ಇದು ಕೇವಲ ಕಥೆಯ ಒಂದು ಭಾಗವಾಗಿದೆ. ಆಗಿನ ಆ 10,000,000 ಈಗ 10,000,000ಕ್ಕಿಂತ ಹೆಚ್ಚಿನದನ್ನು ತರುವುದಾಗಿದೆ. ದಿನ ಕೂಲಿಗೆ ವಾಸ್ತವವಾಗಿ ದಿನಾರುವಗಳು ಕೂಡಾ ಸ್ಪಷ್ಟವಾಗಿ ಯೋಗ್ಯ ಬೆಲೆಯುಳ್ಳವುಗಳು ಆಗಿದ್ದು ದ್ರಾಕ್ಷೆತೋಟದಲ್ಲಿನ ಕೆಲಸಗಾರರ ಸಾಮ್ಯದಲ್ಲಿನ ಕೆಲಸಗಾರರಿಗೆ ಕೊಡುವ ಸಂಬಳದ ಬೆಲೆಯಂತೆ ಇದು ಇದೆ

(ಮತ್ತಾಯ 20:116).[2] ಅಂದರೆ ಅದರ ಅರ್ಥ ಅದು ಆ ಮನುಷ್ಯನು 50,000,000 ದಿನದ ಕೆಲಸಕ್ಕೋಸ್ಕರ ತಮ್ಮ ಒಡೆಯನಿಗೆ ಸಮಂತರವಾದ ಸಂಬಂಳವನ್ನು ತೆಗೆದುಕೊಂಡಿದ್ದಾನೆ! ವಾರಕ್ಕೆ ಸರಾಸರಿ ಸಂಬಳವು 250 ಆಗಿರಬಹುದು. ಇದು ಐದರಿಂದ ಭಾಗಿಸಲ್ಪಟ್ಟರೆ, ಇದರ ಅರ್ಥ ಸರಾಸರಿ ದಿನದ ಸಂಬಳದ 50 ಆಗಿರುತ್ತದೆ. ಅದನ್ನು 50,000,000 ದಿನಗಳಿಂದ ಗುಣಿಸಿದಾಗ ನೀವು ಒಟ್ಟು 2,500,000,000ನ್ನು ನೀವು ಪಡೆಯುತ್ತೀರಿ! ಈ ಮನುಷ್ಯನು ತನ್ನ ಯಜಮಾನನಿಂದ ಇಂದಿನ ದಿನದಲ್ಲಿ ಒಬ್ಬ ಮನುಷ್ಯ 2,500,000,000ನ್ನು ಹೊಂದಿರುವ ಸಾಲದಂತೆ ಸಾಲವನ್ನು ಪಡೆದಿದ್ದನು!

ನಾವು ಇದರಿಂದ ಏನನ್ನು ಕಲಿಯುತ್ತೇವೆ? *ಈ ಮನುಷ್ಯನು ತಾನು ಹಿಂದಿರುಗಿರುಸುವ ಸಾಮರ್ಥ್ಯವನ್ನು ಮೀರಿ ಸಾಲವನ್ನು ಮಾಡಿದ್ದನು!*

ಇಂಥ ಪರಿಸ್ಥಿತಿಗೆ ಆತನು ಹೇಗೆ ಒಳಗಾದನು? ಇಲ್ಲ ಯಾರೊಬ್ಬರೂ ತಿಳಿಯರು. ಕೆಲವರ ಪ್ರಕಾರ ಈ ಕಥೆಯಲ್ಲಿನ ಸೇವಕನು ರಾಜವಂಶಸ್ಥನಾಗಿದ್ದು ತನ್ನ ತೆರಿಗೆಯಲ್ಲಿ ವಂಚಿಸುವವನೂ ಅಥವಾ ರಾಜ್ಯದಲ್ಲಿನ ಸಂಪತ್ತನ್ನು ಕಳುವು ಮಾಡಿದವನೂ ಆಗಿರಬೇಕು. ಆದರೆ ಅಂಥ ದೈತ್ಯವಾದ ಸಾಲದ ಲೆಕ್ಕವನ್ನು ಕೊಡಬೇಕು ಎಂಬುದು ಅಸಂಗತವೆಂಬಂತೆ ಇಲ್ಲಿ ಕಾಣುತ್ತದೆ. ಒಬ್ಬ ಮನುಷ್ಯನು ಹೀಗೆ ಬರೆಯುತ್ತಾನೆ.

> ಇದು ಎಂಥ ದೈತ್ಯ ಸಾಲವಾಗಿತ್ತೆಂದರೆ ಇದು ಪಾಲಿಸ್ತೇನಿನ ಐದು ಪ್ರಾಂತಗಳ (ಯೂದಾಯ, ಪೆರಿಯಾ, ಇದುಮಾಯ, ಸಮಾರ್ಯ, ಮತ್ತು ಗಲಿಲಾಯ) ಒಟ್ಟು ಆದಾಯ ತೆರಿಗೆಯೂ ಕೂಡಾ ಎಂಟುನೂರು ತಲಾಯಗಳು ಆಗಿತ್ತು. ಇನ್ನೊಂದು ಮಾತಿನಲ್ಲಿ, ಆ ಸೇವಕನ ಸಾಲವು ರಾಷ್ಟ್ರೀಯ ಬಜೆಟ್ ಹಣಕ್ಕಿಂತಲೂ ಹತ್ತುಪಟ್ಟು ಹೆಚ್ಚಾಗಿತ್ತು.[3]

ಆ ಮನುಷ್ಯನು ಅಷ್ಟೊಂದನ್ನು ಸಾಲವನ್ನು ಹೇಗೆ ಪಡೆದನು? ಅದಕ್ಕೆ ಉತ್ತರ ನನಗೆ ಈ ರೀತಿಯಾಗಿ ಕಾಣುತ್ತದೆ, ಅದು ಆತನು ಹಾಗೆ ಮಾಡಿರಲಿಕ್ಕಿಲ್ಲ! ಒಬ್ಬ ಆ ಮನುಷ್ಯನು ಸಾಲದಲ್ಲಿ ಅಷ್ಟೊಂದು ಮುಂದೆ ಹೋಗುವದು ಅಸಾಧ್ಯವಾದದ್ದಾಗಿದೆ!

ಯೇಸು ಅಂಥ ಸಂಖ್ಯೆಯನ್ನು ಯಾಕೆ ಉಪಯೋಗಿಸಿದನು? ಪರಲೋಕ ರಾಜ್ಯದಲ್ಲಿ ಕ್ಷಮಾಪಣೆಯು ಯಾವ ತರದಾಗಿರುತ್ತದೆ ಎಂಬುದನ್ನು ತೋರಿಸಲು ಆತನು ಬಯಸಿದ್ದನು (ಮತ್ತಾಯ 18:23). ಅವರು ದೇವರ ಮಕ್ಕಳಾಗುವಾಗ ಅವರು ತಮ್ಮ ಸಾಲದ, ದೊಡ್ಡ ಪ್ರಮಾಣದ ಪಾಪದಿಂದ ಕ್ಷಮಿಸಲ್ಪಡುತ್ತಾರೆ ಎಂದು ಅವರಿಗೆ ತೋರಿಸಲು ಆತನು ಈ ಕಥೆಯನ್ನು ಹೇಳಿದನು.

ನಮ್ಮ ಪಾಪಗಳಿಗಾಗಿ ನಾವು ಸಹಾ ನಿರೀಕ್ಷಾ ರಹಿತವಾಗಿ ಸಾಲದಲ್ಲಿ ಇರುತ್ತೇವೆ. ಪಾಪವು ಬಲು ಭಯಂಕರವಾದದ್ದು ಇದು ಸರ್ವಶಕ್ತನಾದ ದೇವರನ್ನು ಉಲ್ಲಂಘಿಸಿದಂತಾಗಿದ್ದು ಮುಂದುವರೆದು ಇದು ನಾವು ಎಂದಿಗೂ ನಮ್ಮಷ್ಟಕ್ಕೆ ನಾವೇ ಸರಿಪಡಿಸಲಾರೆವು. ಎಂದಿಗೂ ತೀರಿಸಲು ಅಸಾಧ್ಯವಾದ ಸಾಲವನ್ನು ನಾವು ಆತನಲ್ಲಿ ಮಾಡಿದ್ದೇವೆ!

ವಚನ 25ರಲ್ಲಿ ನಾವು ಓದುವಂತೆ: "ಆ ಸಾಲಾ ತೀರಿಸುವುದಕ್ಕೆ ಅವನಲ್ಲಿ ಏನೂ ಇಲ್ಲದ್ದರಿಂದ ಅವನ ಒಡೆಯನು ಅವನನ್ನೂ ಅವನ ಹೆಂಡತಿ ಮಕ್ಕಳನ್ನೂ ಅವನ ಬದುಕೆಲ್ಲವನ್ನೂ ಮಾರಿ ಅದನ್ನು ತೀರಿಸಬೇಕೆಂದು ಅಪ್ಪಣೆ ಮಾಡಿದನು." ಆತನು ಎಲ್ಲಿಯವರೆಗೆ ಸಾಲ ತೀರಿಸಬಹುದು? ಆ ಸಾವು 10,000,000ಗೆ ಸಮಾನವಾದದ್ದು ಆಗಿರಬಹುದು. ಶೇಕಡಾ ಐದರ ಬಡ್ಡಿಯಂತೆ, ಒಂದು ವರ್ಷಕ್ಕೆ ಬಡ್ಡಯೇ 500,000 ಆಗುತ್ತದೆ! ಆತನ ಸೆರೆಯಲ್ಲಿರುವಾಗ ಆ ಹಣವನ್ನು ತೀರಿಸುವುದಕ್ಕೆ ಯಾವ ಅವಕಾಶವು ಉಂಟು? ಆತನಿಗೋಸ್ಕರ "ಹೊರಗಡೆಯಲ್ಲಿ" ದುಡಿಯಲು ನೂರು ಜನರಿದ್ದರೂ ಅವರು ಆತನ ಸಾಲದ ಬಡ್ಡಿಯನ್ನು ಮುಟ್ಟಿಸಲೂ ಕೂಡಾ ಅಸಮರ್ಥರಾಗುತ್ತಿದ್ದರು! ಸತ್ಯಾಂಶವೆಂದರೆ ತಾನು ತೆಗುದುಕೊಂಡ

ಸಾಲವನ್ನು ಹಿಂತಿರುಗಿಸುವಲ್ಲಿ ಯಾವ ಅವಕಾಶವೂ ಇರಲಿಲ್ಲ. *ಉಳಿದ ದಿನಗಳಲ್ಲಿ ಆತನು ಸೆರೆಮನೆಯಲ್ಲಿದ್ದನು. ಆತನು ಜೀವಾವಧಿಯ ಶಿಕ್ಷೆಯಲ್ಲಿದ್ದನು.*

ಮತ್ತು ಇದೇ ತೆರನಾಗಿ ಇದು ನಮ್ಮೊಂದಿಗೂ ಸಂಭವಿಸುತ್ತದೆ. ನಮ್ಮ ಪಾಪವು ಬಲು ಭಯಂಕರವಾದುದ್ದು ಆಗಿದ್ದು ಅದರ ಶಿಕ್ಷೆ ಕೇವಲ ನರಕದಲ್ಲಿ ಇರುವುದಾಗಿದೆ. ನಾವು ತೀರಿಸಬೇಕಾದ ಸಾಲಕ್ಕೆ ಅನುಸಾರವಾಗಿ ನಾವು ಕಷ್ಟಪಡಲಾರೆವು. *ನಮ್ಮ ಶಿಕ್ಷೆಯು, ಆ ಸೇವಕನಂತಿದೆ, ಆತನದು ಜೀವಾವಧಿಯ ಶಿಕ್ಷೆಯಾದರೆ ನಮ್ಮದು ನಿತ್ಯನಿರಂತರವಾದದ್ದು ಆಗಿದೆ!*

ಇದರ ಪರಿಣಾಮವಾಗಿ, ಈ ಸಾಮ್ಯದಲ್ಲಿ ಕ್ಷಮಿಸದ ಪಾಪಿಯ ಸ್ಪಷ್ಟ ಚಿತ್ರಣವನ್ನು ನಾವು ಹೊಂದಿದ್ದೇವೆ. ಎಲ್ಲರೂ ಪಾಪ ಮಾಡಿದಂತೆ ಆತನು ಪಾಪಮಾಡಿದ್ದಾನೆ (ರೋಮಾಪುರ 3:23). ದೇವರು ಆತನನ್ನು ಆತನ ಪಾಪಗಳಿಗೆ ಹೊಣೆಗಾರನನ್ನಾಗಿಸಿದ್ದಾನೆ. ಆತನ ಪಾಪವು ಬಲುಭಯಂಕರವಾದದ್ದು ಆಗಿದ್ದು ಆತನು ಆ ಸಾಲವನ್ನು ತೀರಿಸದಷ್ಟು ಸಾಲವನ್ನು ಆತನು ಮಾಡಿದ್ದಾನೆ. ಅಂತಿಮವಾಗಿ, ಆತನ ಪಾಪಗಳಿಗೋಸ್ಕರ ಅವನನ್ನು ಜವಾಬ್ದಾರಿ ಯನ್ನಾಗಿಸಲು ಮತ್ತು ಶಿಕ್ಷೆಗೆ ಒಳಪಡಿಸುತ್ತಾನೆ. ಆ ಶಿಕ್ಷೆಯು ಯಾವದು? "ಪಾಪದ ಸಂಬಳ ಮರಣ" (ರೋಮಾಪುರ 6:23). ಮರಣವು ನರಕದಲ್ಲಿ ದೇವರಿಂದ ನಿತ್ಯ ಬೇರ್ಪಡುವಿಕೆಯನ್ನು ಮಾಡುವುದಾಗಿದೆ! ಎಂಥ ದುರ್ದೈವಕ್ಲರ ಚಿತ್ರ ಇದಾಗಿದೆ. ಆದರೆ ಕಥೆಯು ಅಲ್ಲಿಯೇ ಕೊನೆಯಾಗುವುದಿಲ್ಲ. ನಾವು ಆ ಮನುಷ್ಯನನ್ನು ಇನ್ನೊಂದು ಸ್ಥಿತಿಯಲ್ಲಿ ನಾವು ನೋಡುತ್ತೇವೆ.

## ಆತನು ಕ್ಷಮಿಸಲ್ಪಟ್ಟ ಸೇವಕ

ವಚನ 26ರಲ್ಲಿ ನಾವು ಓದುವಂತೆ, "ಆ ಸೇವಕನು ಅವನ ಕಾಲಿಗೆ ಬಿದ್ದು ಅವನಿಗೆ ಒಡೆಯನೇ, ಸ್ವಲ್ಪ ತಾಳಿಕೋ, ನಿನ್ನದೆಲ್ಲಾ ನಾನು ಕೊಟ್ಟು ತೀರಿಸುತ್ತೇನೆಂದು ನಮಸ್ಕರಿಸಿದನು." ಅದನ್ನು ತೀರಿಸುವದು ಸಾಧ್ಯವಿದೆ ಎಂದು ಯೋಚಿಸುವದು ಆತನಿಗೆ ಕಷ್ಟಸಾಧ್ಯವಾಗಿತ್ತು. ಆತನು ಹಾಗೆ ಮಾಡಲು ನೋಡಿದನು: ಆತನಿಗಿರುವ ಒಂದೇ ಅವಕಾಶವೆಂದರೆ ಆತನ ಕರುಣೆಯುಳ್ಳ ಒಡೆಯನ ಮುಂದೆ ಹೋಗಿ ತಾನೇ, ಕರುಣೆಗಾಗಿ ಅಂಗಲಾಚಬೇಕಿತ್ತು.

ನಮಗೂ ಸಹ ಇದೇ ತರದ ಒಂದೇ ಅವಕಾಶವಿದೆ, ನಾವು ನಮ್ಮ ಒಳ್ಳೆಯ ಕಾರ್ಯಗಳ ಮೂಲಕ ರಕ್ಷಿಸಲ್ಪಡುವುದಿಲ್ಲ. ನಮಗಿರುವ ಒಂದೇ ಮಾರ್ಗವೆಂದರೆ ದೇವರ ಕರುಣೆಯ ಮುಂದೆ ನಮ್ಮನ್ನು ಹರವಿಕೊಳ್ಳುವದು. ಕ್ಷಮಿಸಲ್ಪಡುವುದಕ್ಕಾಗಿ ನಾವು ಸಿದ್ಧರಾದಾಗ ದೇವರ ಸನ್ನಿಧಾನದಲ್ಲಿ ಬಂದಾಗ, "ದೇವರೇ, ನೋಡು ನಾನು ಒಳ್ಳೆಯ ಮನುಷ್ಯನು. ನಾನು ಒಬ್ಬ ಧಾರ್ಮಿಕಸ್ಥನಾಗಿದ್ದೇನೆ, ಅಂತಿಮವಾಗಿ ನಾನು ನಿನ್ನೊಂದಿಗೆ ಇರಲು ಮತ್ತು ಸಭೆಯ ಭಾಗ ವಾಗಿರಲು ನಿರ್ಧರಿಸಿದ್ದೇನು. ಈ ವಿಷಯದ ಮೇಲೆ ನಾವು ಸಮಾಲೋಚನೆ ಮಾಡೋಣ. ನೀನು ನೀನು ನನ್ನ ಪಾಪಗಳನ್ನು ಕ್ಷಮಿಸುವುದಾದರೆ ನಾನು ದೀಕ್ಷಾಸ್ನಾನಮಾಡಿಸಿಕೊಳ್ಳು ತ್ತೇನೆ. ನಂತರ ನಾನು ನಿನ್ನ ಜೊತೆಗೆ ಇರುತ್ತೇನೆ, ಮತ್ತ ನನ್ನಂಥವನನ್ನು ನೀನು ಹೊಂದಿದ್ದಕ್ಕಾಗಿ ನೀನು ಅದೃಷ್ಟಶಾಲಿದ್ದಿ" ಎಂಬ ಭಾವನೆಯೊಡನೆ ದೇವರೆಡೆಗೆ ಬಾರದಿರು. ಅದು ಕ್ಷಮಾಪಣೆಯ ಮಾರ್ಗವಲ್ಲ! ಕ್ಷಮಾಪಣೆಗೋಸ್ಕರ ನೀವು ಬರುವಾಗ, "ತರುವುದಕ್ಕೆ ನನ್ನ ಕೈಯಲ್ಲಿ ಏನೂ ಇಲ್ಲ; ಶಿಲುಬೆಗೆ ಮಾತ್ರ ಆತುಕೊಳ್ಳುತ್ತೇನೆ" ಎಂದು ಹೇಳುವವನಾಗಿರ ಬೇಕು. ನೀವು ಎಂದಿಗೂ ಏನನ್ನೂ ದೇವರಿಗೆ ಕೊಡಲಾರಿರಿ ಮತ್ತು ದೇವರಿಂದಲೇ ಎಲ್ಲವನ್ನು ಪಡೆಯುವಿರಿ ಎಂಬುದನ್ನು ಅರಿತುಕೊಳ್ಳುವದು ಅವಶ್ಯವಿದೆ. "ದೇವರೇ ಪಾಪಿಯಾದ ನನ್ನನ್ನು ಕರುಣಿಸು" ಎಂದು ಸುಂಕದವನು ಪ್ರಾರ್ಥಿಸಿದಂತೆ ಬೇಡಿಕೋ. ತಪ್ಪಿಹೋದ ಮಗನ ಹಾಗೆ, "ಪರಲೋಕಕ್ಕೆ ವಿರುದ್ಧವಾಗಿ ನಾನು ಪಾಪಮಾಡಿದ್ದೇನೆ ... ನಾನು ... ಯೋಗ್ಯನಲ್ಲ" ಎಂದು

ಪಶ್ಚಾತ್ತಾಪದಿಂದ ನೀನು ಬರಬೇಕು.

ದೇವರು ಬೈಬಲ್‌ನಲ್ಲಿ ಕೊಡಲ್ಪಟ್ಟ ಮಾರ್ಗದಲ್ಲಿ; ಯೇಸುವನ್ನು ನಂಬುವುದರ ಮೂಲಕ (ಯೋಹಾನ 8:24), ನಿಮ್ಮ ನಂಬಿಕೆಯನ್ನು ಅರಿಕೆ ಮಾಡಿಕೊಳ್ಳುವ ಮೂಲಕ (ಮತ್ತಾಯ 10:32), ನಮ್ಮ ಪಾಪಗಳಿಗೆ ಪಶ್ಚಾತ್ತಾಪಡುವುದರ ಮೂಲಕ (ಲೂಕ 13:3), ರಕ್ಷಣೆಯನ್ನು ಹೊಂದಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೂಲಕ (ಮಾರ್ಕ 16:16) ನೀವು ಕ್ರಿಸ್ತನೆಡೆಗೆ ಬನ್ನಿರಿ. ಈ ಸಂಗತಿಗಳನ್ನು ನೀನು ಮಾಡಿದಾಗ, ನೀನು ದೇವರೊಡನೆ ವ್ಯವಹಾರಕ್ಕೆ ಇಳಿದಿ ಎಂದು ತಿಳಿಯದಿರು; ನಾನು ಮಾಡಬೇಕಾದ ಕೆಲಸ ಇವು ನೀನು ಮಾಡಬೇಕಾದ ಕೆಲಸ ಇವು ಎನ್ನಬೇಡ. ದೇವರೊಡ ನಮ್ರವಾಗಿ ಆತನ ಕೃಪೆಗಾಗಿ ಆತನನ್ನು ಬೇಡಿಕೋ; ಏನನ್ನಾದರೂ ಮಾಡಿ ರಕ್ಷಣೆಯನ್ನು ಸಂಪಾದಿಸಲಾರಿ ಎಂಬುದನ್ನು ಅರಿತಿಕೋ!

ವಚನ 27 ಹೇಳುವಂತೆ, "ಆ ಸೇವಕನ ಒಡೆಯನು ಕನಿಕರಪಟ್ಟು ಅವನನ್ನು ಬಿಡಿಸಿ ಆ ಸಾಲವನ್ನೆಲ್ಲಾ ಬಿಟ್ಟುಬಿಟ್ಟನು." ಇಲ್ಲೊಂದು ಒಳ್ಳೆಯ ಸುದ್ದಿಯಿದೆ! ಆ ಸೇವಕನು ಎಂದಗೂ ಮರಳಿಸಲು ಸಾಧ್ಯವಾಗದ ಸಾಲವನ್ನು ಅರಸನು ಉಚಿತವಾಗಿ ಕ್ಷಮಿಸಿಬಿಟ್ಟನು. ಇದನ್ನು ನಮಗೆ ಅನ್ವಯಿಸ್ಕೊಳ್ಳುವುದಾದರೆ, ಅದೇ ಕೃಪೆಯಾಗಿದೆ. ನಾವು ರಕ್ಷಿಸಲ್ಪಟ್ಟಾಗ, *ನಾವು ಬಯಸಿದ್ದಕ್ಕಿಂತ ಹೆಚ್ಚಾಗಿ ದೇವರು ನಮ್ಮ ಕ್ಷಮಿಸುವನು! ನಾವು ಸಂಪಾದಿಸದ ಅನುಕೂಲವನ್ನು ಆತನು ನಮಗೆ ಕೊಡುವನು.* ನಾವು ಎಂದಿಗೂ ಮರಳಿಸಲಾಗದ ಮತ್ತು ಹಿಂತಿರುಗಿಸದ ಮತ್ತು ಹಿಂತಿರುಗಿಸುವ ನಿರೀಕ್ಷೆಯೂ ಇಲ್ಲದ ಸಾಲವನ್ನು ಆತನು ತೆಗೆದುಹಾಕುತ್ತಾನೆ!

ಈ ಕಥೆಯಲ್ಲಿ ಅರಸನು ಆ ಸೇವಕನು ಸಾಲವನ್ನು ಮರಳಿಸಿದ ನಂತರ ಆತನನ್ನು ಕ್ಷಮಿಸಲಿಲ್ಲ ಎಂಬುದನ್ನು ಗಮನಿಸಿರಿ. ದೇವರೂ ಸಹಿತ ನಾವು ಅದನ್ನು ತೆರಬೇಕಾದುದರ ಬದಲಾಗಿ ಕ್ರಿಸ್ತನ ರಕ್ತವನ್ನು ನಮ್ಮ ಪಾಪಗಳಿಗೆ ಸಂಬಳದಂತೆ ಸ್ವೀಕರಿಸಿದ್ದಾನೆ. (ನೋಡಿ ತೀತ 3:5.)

ಆದರೆ ಕಥೆಯು ಅಲ್ಲಿಯೇ ಕೊನೆಯಾಗದು. ಕ್ಷಮಿಸಲ್ಪಟ್ಟ ಆ ಸೇವಕನು ಇನ್ನೊಬ್ಬ ಸೇವಕನನ್ನು ಕ್ಷಮಿಸಲು ವಿಫಲನಾದನು ಎಂಬುದು ದುಖಕರವಾದ ಸಂಗತಿಯಾಗಿದೆ.

## ಆತನೊಬ್ಬ ಕ್ಷಮೆಕೊಡದ ಸೇವಕ

ವಚನ 28ರಲ್ಲಿ, "ತರುವಾಯ ಆ ಸೇವಕನು ತನ್ನ ನೂರು ಹಣಾ ಕೊಡಬೇಕಾದ ಒಬ್ಬ ಜೊತೆ ಸೇವಕನನ್ನು ಕಂಡು ಅವನನ್ನು ಹಿಡಿದು ಎಲ್ಲಾ, ನನ್ನ ಸಾಲ ತೀರಿಸು ಎಂದು ಹೇಳಿಕುತ್ತಿಗೆ ಹಿಸುಕಿದನು." ಎಂಥ ದುಷ್ಟನು ಈತ! ಆತನು ಕ್ಷಮಿಸಲ್ಪಟ್ಟಿದ್ದನು ಆತನು ಸಂತೋಷಿಸಬಹುದಿತ್ತು. ಆತನು ಪ್ರತಿಯೊಬ್ಬರಿಗೂ ಸಂತೋಷವನ್ನು ತರಬಹುದಿತ್ತು. ತನಗೆ ಸಾಲ ಮಾಡಿದ ಪ್ರತಿಯೊಬ್ಬರನ್ನೂ ಕ್ಷಮಿಸಿಬಿಡಬಹುದಿತ್ತು.

ಆದರೆ ಅರಸನೆಡೆಯಿಂದ ಬಂದ ತಕ್ಷಣ ಆತನು ತನಗೆ ಸ್ವಲ್ಪ ಸಾಲಕೊಡಬೇಕಾದ ಮನುಷ್ಯನ ಮೇಲೆ ಬಿದ್ದನು. "ನನಗೆ ಕೊಡಬೇಕಾದ ಹಣವನ್ನು ಕೊಡು" ಎನ್ನುತ್ತಾ ಆ ಮನುಷ್ಯನ ಕುತ್ತಿಗೆಯನ್ನು ಹಿಡಿದು ಹಿಸುಕಲು ಆರಂಭಿಸಿದನು.

ವಾಸ್ತವವಾಗಿ ಆ ಮನುಷ್ಯನು 100 ದಿನಾರುಗಳನ್ನು ಸಾಲವಾಗಿ ಪಡೆದಿದ್ದನು. ಅದು ಬಹುಶಃ 50ಕ್ಕೆ ಸಮವಾಗಿರಬಹುದು. ಅಥವಾ ನೂರುದಿನದ ಕೂಲಿಯೂ ಆಗಿರಬಹುದು. ಅದು ಇಂದು ಬಹುಶಃ 5,000 ಸಾಲವೂ ಆಗಬಹುದು. ಅದ ಲೆಕ್ಕವೆಂದು ಪರಿಗಣಿಸಲ್ಪಟ್ಟಿರಬಹುದು ಆದರೆ ಅದು ಪಾವತಿಸಬೇಕಾದ ಸಾಲವಾಗಿದೆ. ಹೇಗೋ, ಇದರ ಮತ್ತು ಆ ಮನುಷ್ಯನು ಕ್ಷಮಿಸಲ್ಪಟ್ಟ ಸಾಲದ ಮಧ್ಯ ಇರುವ ವ್ಯತ್ಯಾಸ ಇವುಗಳಲ್ಲಿ ಯಾವದು ಮಹತ್ವದ್ದಾಗಿದೆ. 20ರ ಸಾಲದ ಜೊತೆ 10,000,000ರ ಸಾಲವನ್ನು ಹೋಲಿಸಿರಿ! ಆತನು ಹೊಂದಿದ ಶೇಕಡಾ 1ರ 2/10,000 ಸಾಲವು ಕ್ಷಮಿಸಲ್ಪಟ್ಟಿದೆ!

ಇದರಿಂದ ನಾವು ಕಲಿಯಬೇಕಾದದ್ದು ಏನಿದೆ? ಇದು: *ಯಾವುದನ್ನು ಕ್ಷಮಿಸಲು ನಾವು ಕರೆಯಲ್ಪಡುತ್ತೇವೆಯೋ ಅದು ದೇವರು ನಮ್ಮ ಕ್ಷಮಿಸಿದ್ದಕ್ಕೆ ಹೋಲಿಕೆಯಾಗದು.* ಹೇಗೋ, ನಿನ್ನ ವಿರುದ್ಧ ತಪ್ಪುಮಾಡಿರುವದು ದೊಡ್ಡವುಗಳಲ್ಲ, ದೇವರ ವಿರುದ್ಧ ನೀನು ಮಾಡಿದ ತಪ್ಪುಗಳು ಗಣನೀಯವಾಗಿ ದೊಡ್ಡವುಗಳು ಆಗಿವೆ. ನೀನು ಹಾಗಿಲ್ಲವೇ, ನಿನಗೆ ವಿರುದ್ಧವಾಗಿ ಇತರರು ಮಾಡಿದ ದೋಷಗಳನ್ನು ನೀನು ಮುಕ್ತವಾಗಿ ಕ್ಷಮಿಸಲು ಸಿದ್ಧನಿರಬೇಕಲ್ಲವೇ?

ನಂತರದ ಎರಡು ವಚನಗಳಲ್ಲಿ ನಾವು ಹೀಗೆ ಓದುತ್ತೇವೆ: "ಅವನ ಜೊತೆ ಸೇವಕನು ಅವನ ಕಾಲಿಗೆ ಬಿದ್ದು ಸ್ವಲ್ಪತಾಳಿಕೋ, ತೀರಿಸುತ್ತೇನೆ ಎಂದು ಬೇಡಿಕೊಂಡನು. ಆದರೆ ಅವನು ಒಪ್ಪದೆ ಹೊರಟು ಹೋಗಿ ಆ ಸಾಲಾತೀರಿಸುವ ತನಕ ಅವನನ್ನು ಸೆರೆಯಲ್ಲಿ ಹಾಕಿಸಿದನು." ನಮ್ಮ ಕಥೆಯಲ್ಲಿನ ಈ ಸೇವಕನು ತಾನು ಕ್ಷಮಿಸಲ್ಪಟ್ಟಿದ್ದಾನೆ, ಆದರೆ ಇನ್ನೊಬ್ಬನನ್ನು ಕ್ಷಮಿಸಲಿಲ್ಲ. ಈತನು ತನ್ನನ್ನು ಅರಸನ ಸ್ಥಾನದಲ್ಲಿ ಕಂಡುಕೊಂಡನು. ಈತನಿಗೆ ಕ್ಷಮಿಸಲು ಅಧಿಕಾರವು ಇತ್ತು. ಆದರೆ ಈತನು ಅರಸನ ಉದಾಹರಣೆಯಿಂದ ಏನನ್ನೂ ಕಲಿಯಲಿಲ್ಲ. ಆತನು ಅರಸನ ಮುಂದೆ ಅಡ್ಡಬಿದ್ದಾಗ, ಅರಸನು ಈತನನ್ನು ಕ್ಷಮಿಸಿದ್ದನು. ಆದರೆ ಈತನ ಜೊತೆಸೇವಕನು ಈತನ ಕಾಲಿಗೆ ಬಿದ್ದಾಗ ಈತನು ಕ್ಷಮಿಸಲು ನಿರಾಕರಿಸಿದನು.

ಕೆಲಸಾರಿ ನಾವೂ ಹಾಗೆಯೇ ಇರುತ್ತೇವೆ: *ನಾವು ಕ್ಷಮಿಸಲ್ಪಟ್ಟಿದ್ದರೂ ಬೇರೆ ಯವರನ್ನು ಕ್ಷಮಿಸಲು ನಿರಾಕರಿಸುವವರಾಗಿರುತ್ತೇವೆ.* ಕೆಲವರು ನನ್ನನ್ನು ಬಯ್ಯುತ್ತಾರೆ. ಬಯ್ಯುವುದನ್ನು ಕ್ಷಮಿಸುವ ಬದಲಾಗಿ, ನಾನು ಅದಲ್ಲಿ ನೆನಪಿನಲ್ಲಿಟ್ಟುಕೊಂಡು ಮುಂದಿನ ಸಾರಿ ಆತನನ್ನು ಕಂಡಾಗ ಆತನನ್ನು ಬಯ್ಯುವುದಲ್ಲ. ನಾನು ಯೋಚಿಸುತ್ತೇನೆ, ಕಚೇರಿಯಲ್ಲಿ ಯಾರೋ ಒಬ್ಬರು ಯಾವುದೋ ಒಂದು ದುರ್ವ್ಯವಹಾರ ಮಾಡಿಯೂ ಕೂಡಾ, ಮುಂಬಡ್ತಿಯನ್ನು ಪಡೆದಾಗ ನಾನು ಹಾಗೇ ಮಾಡುವುದುಂಟು. ಹೀಗೆ ನಾನು ಆತನ ಹೊಸ ಕೆಲಸದಲ್ಲಿ ತೊಂದರೆಗೊಳಿಸುವ ಪ್ರತಿಯೊಂದನ್ನು ಮಾಡಬಹುದು.

ಇದು ಚರ್ಚಿನಲ್ಲಿಯೂ ಕೂಡಾ ಸಂಭವಿಸಬಹುದು. "ಅವರು ನನಗೆ ವರ್ಗದಲ್ಲಿ ಬೋಧಿಸುವುದಿಲ್ಲ, ಮತ್ತು ಅವರು ಯಾವಾಗಲೂ ಬೇರೆಯವರು ಅನಾ ರೋಗ್ಯದಲ್ಲಿರುವದನ್ನು ಪ್ರಕಟಿಸುತ್ತಾರೆ, ಆದರೆ ನಾನು ಅನಾರೋಗ್ಯದಲ್ಲಿರುವಾಗ ಎಂದಿಗೂ ಪ್ರಕಟಿಸುವುದಿಲ್ಲ. ನಾನು ಅವರನ್ನು ಎಂದಿಗೂ ಕ್ಷಮಿಸುವುದಿಲ್ಲ. ಅವರು ನನಗೆ ಕ್ಷಮೆಕೇಳುವ ಹಾಗೆ ಮಾಡುತ್ತೇನೆ. ನನಗೆ ಸಾಧ್ಯವಾದೆಡೆಯೆಲ್ಲ ನಾನು ಅವರಿಗೆ ತೊಂದರೆಯನ್ನು ಮಾಡುತ್ತೇನೆ." *ನಾವು ಎಷ್ಟೋ ಕ್ಷಮೆಗೆ ಒಳಗಾಗಿದ್ದೇವೆ, ಆದರೆ ನಮ್ಮ ವಿರುದ್ಧವಿರುವ "ಚಿಕ್ಕ ತಪ್ಪನ್ನು" ಸಹ ನಾವು ಕ್ಷಮಿಸುವುದನ್ನು ನಿರಾಕರಿಸುವವರಾಗಿದ್ದೇವೆ.*

ವಚನ 31ರಲ್ಲಿ ನಾವು ಹೀಗೆ ಓದುತ್ತೇವೆ: "ಅವನ ಜೊತೆ ಸೇವಕರು ನಡೆದ ಸಂಗತಿಯನ್ನು ನೋಡಿ ಬಹಳವಾಗಿ ದುಃಖಪಟ್ಟು ಒಡೆಯನ ಬಳಿಗೆ ಬಂದು ನಡೆದದನ್ನೆಲ್ಲಾ ತಿಳಿಸಿದರು." ಒಬ್ಬ ಕ್ರೈಸ್ತನು ಕ್ಷಮಿಸಲು ವಿಫಲನಾದಾಗ ದುಗುಡಪಡುವದು ಸರಿಯಾದ ಸಂಗತಿಯಾಗಿದೆ. ಆದರೆ ಮುಖ್ಯ ಸಂಗತಿ ಎಂದರೆ ಅದು ಅರಸನಿಗೆ ಗೊತ್ತಾಯಿತು. ಮತ್ತು ನಮ್ಮ ಅರಸ-ದೇವರು ನಾವು ಕ್ಷಮಿಸಲು ವಿಫಲರಾಗುವುದನ್ನು ತಿಳಿದಿರುತ್ತಾನೆ!

ಅದು ನಮ್ಮ ಸೇವಕನ ಎರಡನೇ ಹಂತಕ್ಕೆ ನಮ್ಮನ್ನು ತರುವುದಾಗಿದೆ:

## ಆತನು ಕ್ಷಮಗೆ ಯೋಗ್ಯನಲ್ಲದ ಸೇವಕನು ಆದನು

ಎಲ್ಲಿಯವರೆಗೆ ಆತನು ಕ್ಷಮಿಸಲು ನಿರಾಕರಿಸಿದಷ್ಟು, ಆತನು ನಮ್ಮನ್ನು ಕ್ಷಮಾಪಣೆ ಹೊಂದದೇ ಹೋದನು.

ವಚನ 32 ಮತ್ತು 33 ಹೇಳುವುದೇನೆಂದರೆ, "ಆಗ ಒಡೆಯನು ಅವನನ್ನು ಕರೆಯಿಸಿ ಎಲ್ಲಾ ನೀಚನೇ ನೀನು ನನ್ನನ್ನು ಬೇಡಿಕೊಂಡಿದ್ದರಿಂದ ಆಸಾಲವನ್ನೆಲ್ಲಾ ನಾನು

ಬಿಟ್ಟುಬಿಟ್ಟೆನಲ್ಲಾ; ನಾನು ನಿನ್ನನ್ನು ಕರುಣಿಸಿದ ಹಾಗೆ ನೀನೂ ಸಹ ನಿನ್ನ ಜೊತೆ ಸೇವಕನನ್ನು ಕರುಣಿಸಬಾರದಿತ್ತೇ" ಎಂದು ಹೇಳಿದನು. ಕ್ಷಮಿಸಲ್ಪಟ್ಟ ಈ ಮನುಷ್ಯನು ಇತರರಿಗೂ ಸಹ ಅದೇ ತರದ ಕ್ಷಮಾಪಣೆಯನ್ನು ಕೊಡಬೇಕಾದದ್ದು ಯೋಗ್ಯವಾದದ್ದಾಗಿದೆ.

*ದೇವರಿಂದ ಮುಕ್ತವಾಗಿ ಕ್ಷಮಿಸಲ್ಪಟ್ಟ ನಾವು, ಅದೇ ಆತರದ ಕ್ಷಮಾಪಣೆಯನ್ನು ಇತರರಿಗೂ ಕೊಡಬೇಕು ಇದು ಯೋಗ್ಯವಾದದ್ದೇ ಆಗಿದೆ!* ಹಾಗೆ ಮಾಡಲು ನಮಗೆ ಆಜ್ಞಾಪಿಸಲ್ಪಟ್ಟಿದೆ: "ಮತ್ತೊಬ್ಬನ ಮೇಲೆ ತಪ್ಪುಹೊರಿಸುವುದಕೆಕ ಕಾರಣವಿದ್ದರೂ ತಪ್ಪು ಹೊರಿಸದೆ ಒಬ್ಬರಿಗೊಬ್ಬರು ಸೇರಿಸಿಕೊಂಡು ಕ್ಷಮಿಸಿರಿ" (ಕೊಲಸ್ಸೆ 3:13). ದೇವರು ನಮ್ಮನ್ನು ಪ್ರೀತಿಸಿದ ಹಾಗೆ ನಾವೂ ಕೂಡ ಇತರರನ್ನು ಪ್ರೀತಿಸಬೇಕು ದೇವರು ನಮ್ಮನ್ನು ಕ್ಷಮಿಸಿದ ಹಾಗೆ ನಾವು ಇತರರನ್ನು ಕೂಡಾ ಕ್ಷಮಿಸಬೇಕು!

ಆದರೆ ಇದಕ್ಕೆ ಆಕ್ಷೇಪಣೆ ಮಾಡಬಹುದು: "ಆತನನ್ನು ಕ್ಷಮೆಗೆ ಅರ್ಹನಲ್ಲ." ದೇವರು ನಮ್ಮನ್ನು ಕ್ಷಮಿಸಿದಾಗ ನಾವು ಎಷ್ಟು ಒಳ್ಳೆಯವರಿದ್ದವು? "ಆತನು ನಾನು ಕ್ಷಮಿಸಲು ಸಾಧ್ಯವಾಗದಂತಹ ನನಗೆ ಅನೇಕ ತೊಂದರೆದಾಯಕ ಕೆಲಸವನ್ನು ಮಾಡಿದ್ದಾನೆ" ಹಾಗಾದರೆ ಎಂಥ ತೊಂದರೆದಾಯಕ ಕೆಲಸಗಳನ್ನು ದೇವರಿಗೆ ಮಾಡಿದ್ದೇವೆ? ಅವರು ಆ ಹತ್ತು ಸಾವಿರ ತಲಾಂತನ್ನು ಸಾಲಪಡೆದವನಿಗೆ ಸಮಾನವಾದವರಾಗಿದ್ದಾರೆ? ಯೇಸು ವಿಪ್ಲವಗೊಂಡನು, ಹೊಡೆಸಿಕೊಂಡನು, ಅವಮಾನತನಾದನು ಜಜ್ಜಲ್ಪಟ್ಟನು ಮತ್ತು ಕ್ರೂಜಿನಾದನು. ಆದಾಗ್ಯೂ ಆತನು ಕ್ಷಮಿಸಲು ಸಿದ್ದನಿದ್ದನು. ಅಥವಾ "ಆದರೆ ಆತನು ಎಂದಿಗೂ ನನ್ನ ಹತ್ತಿರ ಬರಲಿಲ್ಲ ಮತ್ತು ಕ್ಷಮಿಸಲು ಬೇಡಿಕೊಳ್ಳಲಿಲ್ಲ" ಎಂದು ಹೇಳಲಿಲ್ಲ. ಯೇಸು "ತಂದೆಯೇ ಅವರನ್ನು ಕ್ಷಮಿಸು ಅವರು ಏನು ಮಾಡುತ್ತಿದ್ದಾರೋ ಅವರರಿಯರು" ಎಂದು ಆತನು ತಂದೆಗೆ ಪ್ರಾರ್ಥಿಸುವ ಮುನ್ನ ಯಾರಾದರೂ ತಮ್ಮನ್ನು ಕ್ಷಮಿಸಲು ಯೇಸುವಿನಲ್ಲಿ ಕೇಳಿಕೊಂಡರೇ?

ಇನ್ನೊಂದು ಮಾತಿನಲ್ಲಿ, ನಾವು ಕ್ಷಮಿಸದೇ ಇರುವುದಕ್ಕೆ ಯಾವ ನೆವಗಳೂ ಇಲ್ಲ. ನಾವು ಹೇಗೆ ಮುಕ್ತವಾಗಿ ಕ್ಷಮಿಸಲ್ಪಟ್ಟವೋ ನಾವು ಸಹ ಇತರರನ್ನು ಕ್ಷಮಿಸಲು ಸಿದ್ಧರಿರಬೇಕು!

ವಚನ 34 ಹೇಳುವುದೇನೆಂದರೆ, "... ಸಿಟ್ಟುಮಾಡಿ ತನಗೆ ಕೊಡಬೇಕಾದ ಸಾಲವನ್ನು ತೀರಿಸುವ ತನಕ ಪೀಡಿಸುವವರ ಕೈಗೆ ಒಪ್ಪಿಸಿದನು." ಕ್ಷಮಿಸದೆ ಇರುವುದರಿಂದ ಆಗುವ ಪರಿಣಾಮಗಳು ಯಾವವು? ಮೊದಲನೆಯದು, ನಾವು ಕ್ಷಮಿಸಲು ವಿಫಲರಾದಾಗ, ನಾವು ದೇವರನ್ನು ಸಿಟ್ಟಿಗೆಬ್ಬಿಸುತ್ತೇವೆ! ದೇವರು ಸಿಟ್ಟಿಗೇಳು ವದು ಭಯಂಕರವಾದ ಸಂಗತಿಯಾಗಿದೆ. ಸಿಟ್ಟಾದ ದೇವರು ಕೋಪದ್ರಿಕ್ತನಾಗುತ್ತಾನೆ ಮತ್ತು "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕುಬೀಳುವದು ಭಯಂಕರವಾದದ್ದು" (ಇಬ್ರಿಯ 10:31). ಎರಡನೆಯದು, *ನಾವು ಕ್ಷಮಿಸಲು ವಿಫಲರಾದಾಗ, ದೇವರು ನಿಗದಿಮಾಡಿದ ಮೂಲತಹವಾದ ಶಿಕ್ಷೆಗೆ ನಾವು ಅರ್ಹರಾಗುತ್ತೇವೆ.* ಅರಸನು ಕ್ಷಮಾಪಣೆಯನ್ನು ಹಿಂದಕ್ಕೆ ತೆಗೆದುಕೊಂಡನು ಮತ್ತು ಆ ಸೇವಕನನ್ನ ಆತನ ಸಾಲವು ತೀರಿಸುವ ತನಕ ಸೆರೆಮನೆಯಲ್ಲಿ ಹಾಕಿದನು. ಅದು ಎಷ್ಟು ದಿವಸವರೆಗೆ? ನಿತ್ಯವಾಗಿ! ಆತನು ಎಂದಿಗೂ ಅದನ್ನು ತೀರಿಸಲು ಸಮರ್ಥನಾಗಲಾರನು. ನಾವು ಕ್ಷಮಿಸಲು ವಿಫಲರಾಗಾದ, ನಾವೂ ಸಹ ಅದೇ ರೀತಿಯ ಶಿಕ್ಷೆಗೆ ಅರ್ಹರಾಗುತ್ತೇವೆ ಅದರೆ ನಿತ್ಯವಾದ ಶಿಕ್ಷೆ!

ವಚನ 35ರಲ್ಲಿ ನಾವು ಓದುವಂತೆ: "ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನ ಅಪೂರ್ವಕವಾಗಿ ಕ್ಷಮಿಸದೇ ಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು ಅಂದನು." ದೇವರ ಕ್ಷಮಾಪಣೆಯು ನಾವು ಇತರರನ್ನು ಕ್ಷಮಿಸುವುದನ್ನು ಆತುಕೊಂಡಿದೆ ಮತ್ತು ನಮ್ಮ ಕ್ಷಮಾಪಣೆಯು *ಹೃದಯದಿಂದ* ಬಂದದ್ದಾಗಿರಬೇಕು. ನಾವು ಕ್ಷಮಿಸಲು ನಿರಾಕರಿಸಿದ್ದೇ ಆದರೆ ನಾವೂ ಕೂಡಾ ಕ್ಷಮಿಸಲ್ಪಡುವುದಿಲ್ಲ (ಮತ್ತಾಯ 6:14, 15). ಮೊದಲ ಸ್ಥಾನದಲ್ಲಿ ರಕ್ಷಣೆ ಹೊಂದಲು ಮತ್ತು ನಿರಂತರವಾಗಿ ರಕ್ಷಣೆ ಹೊಂದಿಕೊಂಡಿರಲು ನಮ್ಮೆಲ್ಲರಿಗೂ ದೇವರ ಕರುಣೆ, ಕೃಪೆಯು ಮತ್ತು

ಕ್ಷಮಾಪಣೆಯು ಬೇಕು.

## ಮುಕ್ತಾಯ

ಈ ಸೇವಕನ ನಾಲ್ಕು ಹಂತಗಳ ಬಗೆಗೆ ನಾವು ಮಾತನಾಡಿದೆವು; ಮೊದಲನೆಯದು, ಆತನು ಕ್ಷಮಿಸಲ್ಪಟ್ಟಿರಲಿಲ್ಲ; ಎರಡನೆಯದಾಗಿ ಕ್ಷಮಿಸಲ್ಪಟ್ಟನು; ಮೂರನೆಯದಾಗಿ ಆತನು ಕ್ಷಮಿಸಲ್ಲಿ; ನಾಲ್ಕನೆಯದಾಗಿ, ಆತನು ಅಕ್ಷಮ್ಯನಾದನು. ಪ್ರತಿಯೊಬ್ಬರೂ ಕೂಡಾ ಈ ವರ್ಗದ ಯಾವುದಾದರೊಂದು ವರ್ಗದಲ್ಲಿ ಇಡಲ್ಪಟ್ಟಿರುತ್ತಾರೆ ಎಂದು ನೆನಿಸುತ್ತೇನೆ. ನೀನು ಹೇಗೆ ಇದನ್ನು ವರ್ಗೀಕರಿಸುತ್ತೀ?

ನೀನೇನಾದರೂ ಕ್ಷಮಿಸಲ್ಪಡದಿದ್ದರೆ, ನೆನಪಿಡು, ದೇವರು ನಿನ್ನನ್ನು ಪ್ರೀತಿಸುತ್ತಾನೆ, ನಿನ್ನ ಪಾಪಗಳು ಎಷ್ಟೇ ಭಯಂಕರವಾಗಿರಲಿ ಆತನು ನಿನ್ನ್ನು ಕ್ಷಮಿಸಲು ಬಯಸುವವನಾಗಿದ್ದಾನೆ. ಆತನು ಕೊಡಮಾಡಿದ ವಾಕ್ಯಗಳ ಮಾರ್ಗದಲ್ಲಿ ನೀನು ಆತನೆಡೆಗೆ ಬರುವುದಾದರೆ ಆತನು ನಿನ್ನನ್ನು ಒಪ್ಪಿಕೊಳ್ಳುವುದನ್ನು ನಿರಾಕರಿಸುವವುದಕ್ಕೆ ದಾರಿಯೇ ಇಲ್ಲ ಮತ್ತು ಆತನು ನಿನ್ನನ್ನು ತನ್ನವನನ್ನಾಗಿ ಮಾಡಿಕೊಳ್ಳುವವನು ಇದನ್ನು ಕೂಡ ನೆನಪಿಡು.

---

ಟಿಪ್ಪಣಿಗಳು

[1]Burton Coffman, *Commentary on the Gospel of Matthew* (Austin, Tex.: Firm Foundation Publishing House, 1968), pp. 282-83. [2]Ibid., p. 158. [3]William P. Barker, *As Matthew Saw the Master* (Westwood, N.J.: Fleming H. Revell Co., 1964), p. 97, quoted in Burton Coffman, *Matthew*, p. 285.